ಶ್ರೀ ಕೆ.ಹೆಚ್. ಹನುಮೇಗೌಡ :– ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಮಳೆಯಿಂದಾಗಿ ಕಟ್ಟಡ ಬಿರುಕುಬಿಟ್ಟಿದೆಯೆಂದು ಸಚಿವರೇ ಒಪ್ಪಿಕೊಂಡಿದ್ದಾರೆ. ಅಲ್ಲಿ ಈ ವರ್ಷ ಕೂಡ ಜಾಸ್ತಿ ಮಳೆಯಾಗಿದ್ದರೆ ಅನಾಹುತ ಜಾಸ್ತಿ ಆಗುತ್ತಿತ್ತು. ಅಲ್ಲಿ 300–400 ಬಡ ರೋಗಿಗಳು ಇದ್ದಾರೆ. ನಾನು ಒಬ್ಬ ರೋಗಿಯನ್ನು ನೋಡಲು ಹೋದಾಗ ಅಲ್ಲಿದ್ದವರೆಲ್ಲಾ ನನ್ನನ್ನು ಮುತ್ತಿಕೊಂಡು ಅವರ ಕಷ್ಟ ಹೇಳಿದರು. ಯಾವುದೋ ಖಾಯಿಲೆಗೆ ಬಂದು, ಮಳೆ ನೀರಿಂದ ಇನ್ನೊಂದು ಖಾಯಿಲೆಗೆ ತುತ್ತಾಗಬೇಕಾಗಿದೆ. ಅಲ್ಲಿ ಗೋಡೆ ಬಿರುಕುಬಿಟ್ಟಿದ್ದು ಜಾಸ್ತಿ ಮಳೆ ಬಂದು ಕಟ್ಟಡ ಬಿದ್ದರೆ ನಮ್ಮ ಗತಿ ಏನು. ನಮ್ಮ ಜೀವಕ್ಕೆ ರಕ್ಷಣೆ ಇಲ್ಲವೇ ಎಂದು ಕೇಳಿದರು; ಅವರೆಲ್ಲಾ ಕಡುಬಡವರು. ಮುಂದಿನ ವರ್ಷ ಮಳೆ ಪ್ರಾರಂಭವಾಗುವುದರೊಳಗೆ ರಿಪೇರಿ ಮಾಡಿಸಿ ತಾವು ಪುಣ್ಯ ಕಟ್ಟಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ಮಾನ್ಯ ಹನುಮೇಗೌಡರು ಯಾವ ವಿಚಾರವನ್ನು ಹೇಳಬೇಕೆಂದರೂ ಉದ್ರೇಕ ಜಾಸ್ತಿಯಾಗುತ್ತದೆ. ನಾನು ಈ ಬಗ್ಗೆ ಪುಟ್ಟಸ್ವಾಮಿಗೌಡರಿಗೆ ಕೇಳಿದೆ. ಅದಕ್ಕೆ ಅವರು ಸೋರುತ್ತಿರುವುದು ನಿಜ, ಹಳೆಯದಾಗಿರುವುದು ನಿಜ ಎಂದರು. ಆದರೆ ಹನುಮೇಗೌಡರು ಹೇಳುವಷ್ಟು ರೋಗಿಗಳ ಮೇಲೆ ಬಿದ್ದುಹೋಗುವ ಸ್ಥಿತಿಯಲ್ಲಿ ಆ ಕಟ್ಟಡ ಇಲ್ಲ ಎಂದರು. ಆದರೂ ಸಹ ಅದಷ್ಟು ಬೇಗ ಇದನ್ನು ರಿಪೇರಿ ಮಾಡಿಸಿಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ :– ಇರುವ ತೊಂದರೆಯನ್ನು ಹೇಳಬೇಕಾದ್ದು ನನ್ನ ಕರ್ತವ್ಯ. ಜಾಸ್ತಿ ಮಳೆಯಾದರೆ ಗೋಡೆ ಮೇಲೆ ಬೀಳುವುದಿಲ್ಲವೇ? ಈ ವರ್ಷ ಜಾಸ್ತಿ ಮಳೆಯಾಗದೇ ಏನೂ ಆಗಿಲ್ಲ. ಈ ಬೇಸಿಗೆಯಲ್ಲಿ ರಿಪೇರಿ ಮಾಡಿಸುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ :– ಮಾಡಿಸಿಕೊಡುತ್ತೇವೆ.

ನಿಯಮ 334ರ ಮೇರೆಗೆ

(1) ಅರಣ್ಯದಂಚಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂ ರಹಿತ ಬಡವರಿಗೆ ಪಟ್ಟಾ ದೊರಕಿಸಿಕೊಡುವ ಬಗ್ಗೆ.

ಶ್ರೀಮತಿ ಸುಮಾ ವಂಸತ್ (ವಿರಾಜಪೇಟೆ) :– ಮಾನ್ಯ ಉಪಾಧ್ಯಕ್ಷೆಣೀಯವರೆ, ಸ್ವಂತಕ್ಕೆ ಒಂದಿಂಚೂ ಭೂಮಿ ಇಲ್ಲದ ಬಡವರು ಲಕ್ಷಾಂತರ ಮಂದಿ ಅದರಲ್ಲಿಯೂ ಕರ್ನಾಟಕದಲ್ಲಿ ಆದಿವಾಸಿಗಳ ಮತ್ತು ಇತರ ಭೂರಹಿತ ಬಡವರ ಸ್ಥಿತಿ ಸೋಚನೀಯ. ಭೂಮಿಯಿಲ್ಲದ ಇಂಥ ಜನ ನೆಲದ ಮೇಲಿನ ಪ್ರೀತಿಯಿಂದ ಅರಣ್ಯದ ಅಂಚಿನಲ್ಲಿ ಅನೇಕ ಕಡೆ ''ಬಗರ್ ಹುಕುಂ'' ವ್ಯವಸಾಯ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಅನೇಕ ತಲೆಮಾರುಗಳಿಂದ ಇದ್ದಾರೆ. ಅವರ ಅಕ್ರಮಣದ ಅನೇಕ ವರ್ಷಗಳ ಬಳಿಕ ಆ ಭೂಮಿ ಅರಣ್ಯ ಭೂಮಿ ಆಗಿ ಪರಿವರ್ತಿತವಾಗಿದೆ. ಅನಾಗರೀಕರಾದ ಅವಿದ್ಯಾವಂತರಾದ ಭೂರಹಿತ ಆದಿವಾಸಿಗಳು ಮತ್ತು ಇನ್ನಿತರ ಬಡವರು ತಾವು ನಂಬಿನೆಚ್ಚಿದ, ಬದುಕನ್ನೆಲ್ಲ ಧಾರೆ ಎರೆದ ತುಂಡು ಭೂಮಿಯನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಮಧ್ಯಪ್ರದೇಶ ಸರ್ಕಾರ ಇತ್ತೀಚೆಗೆ ಒಂದು ಲಕ್ಷ ಗಿರಿಜನ ಕುಟುಂಬಗಳಿಗೆ ಒಂದು ಲಕ್ಷ ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಪಟ್ಟಾ ದೊರಕಿಸಿಕೊಟ್ಟಿತು. ಅಂತಹದೇ ಸ್ಥಿತಿ ಕರ್ನಾಟಕದಲ್ಲಿದೆ. ಮಧ್ಯಪ್ರದೇಶದ ಮಾಧರಿ ಅನುಸರಿಸಿ, ಕರ್ನಾಟಕದಲ್ಲಿ ಸಹ ಆದರಲ್ಲೂ ಕೊಡಗಿನಲ್ಲಿ ಬಡಗಿರಿಜನರಿಗೆ, ಅರ್ಹ ಭೂರಹಿತ ಬಡವರಿಗೆ ಅರಣ್ಯದಲ್ಲಿ ಹಿಂದಿನಿಂದ ವ್ಯವಸಾಯ ಮಾಡುತ್ತಿದ್ದಲ್ಲಿ ಪಟ್ಟಾ ದೊರಕಿಸಿಕೊಡಬೇಕಾಗಿ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :– ಮಾನ್ಯ ಉಪಾಧ್ಯಕ್ಷೆಣೀಯವರೇ, ಇದಕ್ಕೆ ಸಮಯ ಬೇಕಾಗಿದೆ.

ಉಪಾಧ್ಯಕ್ಷರು :– ಅವರಿಗೆ ಉತ್ತರ ತರಿಸಿಕೊಡಿ.

ಶ್ರೀ ಇ.ಟಿ. ಶಂಭುನಾಥ್ :– ಉತ್ತರ ತರಿಸಿಕೊಡಲಾಗುವುದು.

(ಶ್ರೀ ಆರ್.ಎನ್. ನಾಯಕ್ :– ಸದಸ್ಯರು ಹಾಜರಿರಲಿಲ್ಲ)